| | | |
|---|---|---|
| 14. | ಬಳ್ಳಾರಿ | 3.90 |
| 15. | ಉಡುಪಿ | 3.25 |
| 16. | ಚಾಮರಾಜನಗರ | 1.20 |
| 17. | ಬೆಳಗಾಂ | 3.55 |
| 18 | ಧಾರವಾಡ | 0.25 |
| 19. | ಬಿಜಾಪುರ | 2.00 |
| 20. | ಉತ್ತರ ಕನ್ನಡ | 3.70 |
| 21. | ಬಾಗಲಕೋಟೆ | 2.50 |
| 22. | ಹಾವೇರಿ | 1.50 |
| 23. | ಗದಗ್ | 2.50 |
| 24. | ರಾಯಚೂರು | 1.50 |
| 25. | ಕೊಪ್ಪಳ | 1.50 |
| 26. | ಬೀದರ್ | 3.75 |
| 27. | ಗುಲ್ಬರ್ಗಾ | 18.50 |

**ಸರ್ಕಾರದ ಸಚಿವಾಲಯದಲ್ಲಿ ಬಾಕಿ ಉಳಿದಿರುವ ಕಡತಗಳು**

2848 (3620) ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಸಚಿವಾಲಯದ ವಿವಿಧ ಇಲಾಖೆಗಳಲ್ಲಿ ಇಲ್ಲಿಯವರೆಗೆ ವಿಲೇವಾರಿಯಾಗದೆ ಉಳಿದಿರುವ ಕಡತಗಳ ಸಂಖ್ಯೆ ಎಷ್ಟು;

ಆ) ಇತ್ಯಾರ್ಥವಾಗದೇ ಉಳಿದಿರುವ ಕಡತಗಳನ್ನು ವಿಲೇವಾರಿ ಮಾಡಲು ಸರ್ಕಾರ ನಿಗದಿತ ವೇಳೆಯನ್ನು ಗೊತ್ತುಪಡಿಸುತ್ತದೆಯೇ;

ಇ) ಕಡತಗಳನ್ನು ನಿಗದಿತ ವೇಳೆಗಿಂತ ಹೆಚ್ಚು ವೇಳೆ ವಿಲೇವಾರಿ ಮಾಡದೇ ಇರತಕ್ಕ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) 1,02,493

ಆ) 1958ರ, ಕರ್ನಾಟಕ ಸರ್ಕಾರದ ಸಚಿವಾಲಯದ ಕೈಪಿಡಿಯಲ್ಲಿ ಸಚಿವಾಲಯದಲ್ಲಿ ಕಡತಗಳ ಶೀಘ್ರ ವಿಲೇವಾರಿಗೆ ವಿಧಾನಗಳನ್ನು ರೂಪಿಸಲಾಗಿದೆ. ಸರ್ಕಾರದ ಕಾರ್ಯದರ್ಶಿಗಳು ಪ್ರತಿ ತಿಂಗಳು ಸಿಬ್ಬಂದಿ ಸಭೆಯನ್ನು ನಡೆಸುತ್ತಿದ್ದಾರೆ ಮತ್ತು ಬಾಕಿ ಉಳಿದಿರುವ ಕಡತಗಳ ವಿಲೇವಾರಿಗೆ ವಿಶೇಷ ಆಂದೋಲನವನ್ನು ಸಹ ಕೈಗೊಂಡಿದ್ದಾರೆ. ಇದೇ ರೀತಿ ಪ್ರತಿ ತಿಂಗಳು ಸಚಿವ ಸಂಪುಟವು ಸಚಿವಾಲಯದ ವಿವಿಧ ಇಲಾಖೆಗಳ ಕಡತಗಳ ವಿಲೇವಾರಿಯನ್ನು ಸಮೀಕ್ಷಿಸುತ್ತಿದೆ.

ಇ) ಹೌದು

**ಬೆಂಗಳೂರು ನಗರ ಪಾಲಿಕೆಯ ಹೊಸ ಬಾಂಡ್ ಯೋಜನೆ**

2849( 3624) ಶ್ರೀ ರಾಮಲಿಂಗಾರೆಡ್ಡಿ ( ಜಯನಗರ):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆ 125 ಕೋಟಿ ರೂ. ಬಾಂಡ್ ಯೋಜನೆಯನ್ನು ಯಾವಾಗ ಜಾರಿಗೆ ತರಲಾಯಿತು

ಆ) ಈ ಹಣಕ್ಕೆ ಪ್ರತಿ ವರ್ಷ ನೀಡುವ ಬಡ್ಡಿ ಎಷ್ಟು?

ಇ) ಈ ಹಣದಿಂದ ಕೈಗೊಂಡ ಕಾಮಗಾರಿಗಳು ಯಾವುವು;

ಈ) ಪುನಃ ಹೊಸದಾಗಿ ಬಾಂಡ್ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ;

ಉ) ಹಾಗಿದ್ದಲ್ಲಿ ಹೊಸ ಬಾಂಡ್ ಯೋಜನೆಯನ್ನು ಜಾರಿಗೆ ತರಲು ಕಾರಣಗಳೇನು;

ಊ) ಈ ಯೋಜನೆಯಡಿಯಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳು ಯಾವುವು?

ಶ್ರೀ ಎಸ್. ಎಂ. ಕೃಷ್ಣ ( ಮುಖ್ಯ ಮಂತ್ರಿಗಳು)

ಅ) ಅಕ್ಟೋಬರ್ 1998

ಆ) ರೂ. 16.25 ಕೋಟಿ

ಇ) ವಿವರಗಳನ್ನು ಲಗತ್ತಿಸಾಲಗಿದೆ

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಊ) ಉದ್ಭವಿಸುವುದಿಲ್ಲ